**OS.No**.91/2022 **PW**-1

**ದಿನಾಂಕಃ 01.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು 20ನೇ ಪ್ರತಿವಾದಿ ಪರ ಶ್ರೀ. ಹೆಚ್.ಟಿ.ಆರ್. ವಕೀಲರಿಂದಃ**

ನಾನು ಹುಲ್ಲಹಳ್ಳಿ ಗ್ರಾಮದ 1 ಎಕರೆ 38 ಗುಂಟೆಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹಾಕಿರುತ್ತೇನೆ. ಮೂಲತಹ ದಾವಾ ಆಸ್ತಿ ನನ್ನ ಗಂಡನ ತಂದೆ ಶೆಟ್ಟಯ್ಯ ರವರಿಗೆ ಸೇರಿದ್ದಾಗಿರುತ್ತದೆ. ಈ ಜಮೀನು ಶೆಟ್ಟಯ್ಯ ರವರಿಗೆ ದರಖಾಸ್ತು ಮೂಲಕ ಬಂದಿರುತ್ತದೆ. ಕ್ರಮಸಂಖ್ಯೆ 2 ಮತ್ತು 3 ರ ಆಸ್ತಿಗಳು ಶೆಟ್ಟಯ್ಯರವರು ಖರೀದಿ ಮಾಡಿದ್ದರು ಎಂದರೆ ಹೌದು. ಶೆಟ್ಟಯ್ಯರವರ ಹೆಂಡತಿಯ ಹೆಸರು ಸಣ್ಣಮ್ಮ, ಈ ದಾವೆಯಲ್ಲಿ ಅವರು 1ನೇ ಪ್ರತಿವಾದಿಯಾಗಿದ್ದರು ಎಂದರೆ ಹೌದು. 20 ನೇ ಪ್ರತಿವಾದಿ ಕ್ರಮಸಂಖ್ಯೆ 2 ಅನ್ನು ಖರೀದಿ ಮಾಡುವಾಗ 1ನೇ ಪ್ರತಿವಾದಿಗೆ ಹುಷಾರಿರಲಿಲ್ಲ ಎಂದರೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವಾಗ 1ನೇ ಪ್ರತಿವಾದಿಯ ವಯಸ್ಸು 80 ಎಂದು ತೋರಿಸಿದ್ದೇನೆ ಎಂದರೆ ಹೌದು. 80 ವರ್ಷ ವಯಸ್ಸಾಗಿದ್ದರಿಂದ 1ನೇ ಪ್ರತಿವಾದಿಗೆ ವಯೋ ಸಹಜ ಖಾಯಿಲೆಗಳಿದ್ದವು ಎಂದರೆ ಹೌದು. ವಯೋ ಸಹಜ ಖಾಯಿಲೆಗಳು ಇದುದ್ದರಿಂದ 1ನೇ ಪ್ರತಿವಾದಿಗೆ ಆಸ್ಪತ್ರೆಗೆ ಹೋಗಿ ಬರುಲು, ಔಷದೋಪಚಾರಗಳನ್ನು ಪಡೆಯಲು ಹಣದ ಅವಶ್ಯಕತೆ ಇತ್ತು ಎಂದರೆ ಸಾಕ್ಷಿ ಇತ್ತು, ಆದರೆ ಅವರವನ್ನು 2ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಗೆ 3ನೇ ಪ್ರತಿವಾದಿ ಹೆಂಡತಿ ಇರುತ್ತಾಳೆ ಎಂದರೆ ಹೌದು 2 ಮತ್ತು 3ನೇ ಪ್ರತಿವಾದಿಗಳಿಗೆ 4 ಮತ್ತು 5ನೇ ಪ್ರತಿವಾದಿಗಳು ಮಕ್ಕಳಿರುತ್ತಾರೆ ಎಂದರೆ ಹೌದು. 2022ನೇ ಇಸವಿಯಲ್ಲಿ 4 ಮತ್ತು 5ನೇ ಪ್ರತಿವಾದಿಗಳು ವಿದ್ಯಾಬ್ಯಾಸ ಮಾಡುತ್ತಿದ್ದರು ಎಂದರೆ ಹೌದು.

ವಿದ್ಯಾಭ್ಯಾಸದ ಸಲುವಾಗಿ ಹಾಗೂ ಹಾಸ್ಟೆಲ್ ಫೀ, ಪಿಜಿ ಫೀಗಳನ್ನು ಕಟ್ಟಲು 2ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದ ಆ ಸಮಯಕ್ಕೆ ನಾನು ಬೇರೆಯಾಗಿ ವಾಸ ಮಾಡುತ್ತಿದ್ದೆ, ಹೀಗಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7ನೇ ಪ್ರತಿವಾದಿಗೆ 8ನೇ ಪ್ರತಿವಾದಿ ಹೆಂಡತಿ ಇರುತ್ತಾಳೆ ಎಂದರೆ ಹೌದು. 7ನೇ ಪ್ರತಿವಾದಿಗೆ 9 ಮತ್ತು 10 ನೇ ಪ್ರತಿವಾದಿಗಳು ಮಕ್ಕಳಿರುತ್ತಾರೆ ಎಂದರೆ ಹೌದು. 9ನೇ ಪ್ರತಿವಾದಿಯ ಮದುವೆ ಮಾಡಲು 7ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು ಎಂದರೆ ಗೊತ್ತಿಲ್ಲ. 2022 ರಲ್ಲಿ 10 ನೇ ಪ್ರತಿವಾದಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದರೆ ಹೌದು. 10ನೇ ಪ್ರತಿವಾದಿಯ ವಿದ್ಯಾಭ್ಯಾಸದ ಸಲುವಾಗಿ 7ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು ಎಂದರೆ ಗೊತ್ತಿಲ್ಲ. 12ನೇ ಪ್ರತಿವಾದಿ 13 ನೇ ಪ್ರತಿವಾದಿ ಹೆಂಡತಿ ಇರುತ್ತಾಳೆ ಎಂದರೆ ಹೌದು. 12 ನೇ ಪ್ರತಿವಾದಿಗೆ 14 ಮತ್ತು 15 ಸಣ್ಣ ಮಕ್ಕಳಿರುತ್ತಾರೆ ಎಂದರೆ ಹೌದು. 14 ಮತ್ತು 15 ನೇ ಪ್ರತಿವಾದಿಗಳಿಗೆ ವಿದ್ಯಾಭ್ಯಾಸ ಕೊಡಿಸಲು ಮತ್ತು ಆಸ್ಪತ್ರೆಯ ಖರ್ಚು ನೋಡಿಕೊಳ್ಳಲು 12ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು ಎಂದರೆ ಗೊತ್ತಿಲ್ಲ.

ಶೆಟ್ಟಯ್ಯರವರ ಹೆಣ್ಣುಮಕ್ಕಳಾದ 6 ಮತ್ತು 11 ಪ್ರತಿವಾದಿಗಳಿಗೆ ಮನೆಗಳಲ್ಲಿ ಹಣಕಾಸಿನ ತೊಂದರೆ ಇತ್ತು ಎಂದರೆ ಸಾಕ್ಷಿ ಹಾಗೇನೂ ಇಲ್ಲ ಚೆನ್ನಾಗಿದ್ದಾರೆ ಎಂದು ನುಡಿಯುತ್ತಾರೆ.

ಹುಲ್ಲಹಳ್ಳಿ ಗ್ರಾಮದ ಸ.ನಂ.17/3 ರಲ್ಲಿ 1 ಎಕರೆ 30 ಗುಂಟೆ ಪೈಕಿ 20 ನೇ ಪ್ರತಿವಾದಿ 35



ಗುಂಟೆ ಖರೀದಿ ಮಾಡಿದ ನಂತರ ಇನ್ನೂ 35 ಗುಂಟೆ ಆ ಸರ್ವೆ ನಂಬರ್ ನಲ್ಲಿ ಉಳಿದಿದೆ ಎಂದರೆ ಹೌದು. 20ನೇ ಪ್ರತಿವಾದಿ ಖರೀದಿ ಮಾಡಿದ 35 ಗುಂಟೆ ಆಸ್ತಿಯನ್ನು ಹೊರತುಪಡಿಸಿ ಉಳಿದ ದಾವಾ ಅಸ್ತಿಗಳಲ್ಲಿ ಪಾಲುಪಡೆಯಲು ನಿಮಗೇನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿ ನನ್ನ ಗಂಡನ ಹೆಸರನ್ನು ತೆಗೆದು ಆಸ್ತಿಯನ್ನು ಮಾರಾಟ ಮಾಡಿದ್ದಾರೆ, ಹೀಗಾಗಿ ಆಸ್ತಿಯಲ್ಲಿ ಪಾಲು ಬೇಕು ಎಂದು ನುಡಿಯುತ್ತಾರೆ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.